ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	100
ಉತ್ತರಿಸಬೇಕಾದ ದಿನಾಂಕ	:	22.09.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಕಾರವಾರ ಜಿಲ್ಲೆಯ ಜೋಯಿಡಾ ತಾಲೂಕಿನ ರಾಮನಗರದಲ್ಲಿ ಪಶು ಚಿಕಿತ್ಸಾ ವೈದ್ಯಾಧಿಕಾರಿ ಬಡವರಿಗೆ ಉಚಿತವಾಗಿ ಹಂಚಿಕೆ ಮಾಡಬೇಕಾದ ಕೋಳಿ ಮರಿಯನ್ನು ಒಂದಕ್ಕೆ ರೂ. 50/- ರಂತೆ ಮಾರಿ ಸಾವಿರಾರು ರೂಪಾಯಿ ಬಡವರಿಂದ ಪಡೆದು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ? (ವಿವರ ನೀಡುವುದು.)	ಹೌದು
ಆ)	ಈ ರೀತಿ ಅವ್ಯವಹಾರ ಮಾಡಿ ಕೋಳಿ ಮರಿ ಹಂಚಿಕೆಯಲ್ಲಿ ಹಣದ ದುರುಪಯೋಗ ಮಾಡಿರುವ ಸದರಿ ವೈದ್ಯಾಧಿಕಾರಿಗಳ ಮೇಲೆ ಇಲ್ಲಿಯವರೆಗೆ ಸರಕಾರ ಯಾವ ಕ್ರಮ ಕೈಗೊಂಡಿದೆ. (ವಿವರ ನೀಡುವುದು). ಸದರಿ ವೈದ್ಯಾಧಿಕಾರಿಗಳು ಸರ್ಕಾರದಿಂದ ಬಂದ ಯೋಜನೆಯ ದುರುಪಯೋಗಪಡಿಸಿಕೊಳ್ಳುತ್ತಿದ್ದು, ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು).	ಉಪನಿರ್ದೇಶಕರು (ಆ), ಪಶುಪಾಲನಾ ಇಲಾಖೆ, ಕಾರವಾರ ಇವರು ದಿನಾಂಕ:10/03/2021ರಂದು ಪಶುಚಿಕಿತ್ಸಾಲಯ ರಾಮನಗರ ಇಲ್ಲಿಗೆ ಭೇಟಿ ನೀಡಿ ಈ ಕುರಿತು ವಿಚಾರಿಸಿದ್ದು, ಫಲಾನುಭವಿಗಳಿಂದ ವಂತಿಗೆ ಪಡೆದಿರುವುದು ನಿಜವೆಂದು ತಿಳಿದ ಕಾರಣ ಇದಕ್ಕೆ ವಿವರಣೆಯನ್ನು ಪಡೆದಿರುತ್ತಾರೆ. ಸದರಿ ಪಶು ವೈದ್ಯಾಧಿಕಾರಿಗಳು ಉಚಿತವಾಗಿ ಕೋಳಿಮರಿಗಳನ್ನು ರೈತರಿಗೆ ನೀಡುವ ಬಗ್ಗೆ ಅವರಿಗೆ ಸರಿಯಾದ ಮಾಹಿತಿ ಇಲ್ಲದ್ದರಿಂದ ವಂತಿಗೆಯನ್ನು ಇಲಾಖೆಗೆ ಪಾವತಿ ಮಾಡಬೇಕಾಗುತ್ತದೆ ಎಂಬ ಉದ್ದೇಶದಿಂದ ಪಡೆಯಲಾಗಿತ್ತು ಎಂದು ತಿಳಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಫಲಾನುಭವಿಗಳಿಗೆ ಹಣವನ್ನು ಹಿಂದಿರುಗಿಸಲಾಗಿದೆ ಎಂದು ಸದರಿ ಪಶುವೈದ್ಯಾಧಿಕಾರಿಗಳು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. (ಅಧಿಕಾರಿಯವರ ಲಿಖಿತ ಹೇಳಿಕೆ ಹಾಗೂ ಹಣ ವಾಪಾಸ್ಸು ಪಡೆದ ರೈತರ ಸಹಿ ಇರುವ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ). ಪಶು ವೈದ್ಯಾಧಿಕಾರಿಯವರು ರೈತರ ಹಣವನ್ನು ಹಿಂದಿರುಗಿಸಿರುವುದರಿಂದ ಸದರಿಯವರಿಗೆ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ

ಪಸಂಮೀ ಇ-245 ಸಲೆವಿ 2021

(ಪ್ರಭು ಬಿ ಚವ್ಹಾಣ್)
ಪಶುಸಂಗೋಪನೆ ಸಚಿವರು

ದಿನಾಂಕ : 05/03/2021 ರಂದು ಪಶು ಚಿಕಿತ್ಸಾಲಯ, ರಾಮನಗರ [illegible]

ಸಂಗ್ರಹ ಮಾಡಲಾಗಿದ್ದ 2019-20ನೇ ಸಾಲಿನ (ಟಿಎಸ್‌ಪಿ)

ಸೌಲಭ್ಯಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದ್ದ

ಹಣವನ್ನು ಫಲಾನುಭವಿಗಳಿಗೆ ಮರುಪಾವತಿ ಮಾಡಿರುವ ಬಗ್ಗೆ

ಸ್ವೀಕೃತಿ ಪತ್ರ.

ಸಂ.	ಫಲಾನುಭವಿಯ ಹೆಸರು	ಮರುಪಾವತಿಸಲಾದ ಹಣದ ಮೊತ್ತ	ಫಲಾನುಭವಿಯ ಸಹಿ
01	[illegible] ದೇಸಾಯಿ	ರೂ ಒಂದು ಸಾವಿರ / ₹ 1.000/-	[illegible]
02.	ದೀಪಾ ದತ್ತಾರಾಮ ದೇಸಾಯಿ	ರೂ ಒಂದು ಸಾವಿರ / ₹ 1.000/-	[illegible]
	ಜಯಾ [illegible]	ರೂ ಒಂದು ಸಾವಿರ / ₹ 1.000/-	Jaya
	ಲಕ್ಷ್ಮೀ ಕೃಷ್ಣಾ ದೇಸಾಯಿ	ರೂ ಒಂದು ಸಾವಿರ / ₹ 1.000/-	Laxmi
	[illegible]	ರೂ ಐದು ನೂರು / ₹ 5.00/-	[illegible]
06.	ರೂಪಾ [illegible] ದೇಸಾಯಿ	ರೂ ಒಂದು ಸಾವಿರ / ₹ 1.000/-	Rupa
07	[illegible]	ರೂ ಒಂದು ಸಾವಿರ / ₹ 1.000/-	[illegible]
08.	ಪವಿತ್ರಾ [illegible]	ರೂ ಒಂದು ಸಾವಿರ / ₹ 1.000/-	Pavitra
09	[illegible]	ರೂ ಒಂದು ಸಾವಿರ / ₹ 1.000/-	[illegible]
10.	[illegible]	ರೂ ಒಂದು ಸಾವಿರ / ₹ 1.000/-	Pooja
11	[illegible]	ರೂ ಒಂದು ಸಾವಿರ / ₹ 1.000/-	[illegible]
12	[illegible]	ರೂ ಒಂದು ಸಾವಿರ / ₹ 1.000/-	[illegible]
13	[illegible]	ರೂ ಐದು ನೂರು / ₹ 5.00/-	[illegible]
14.	[illegible]	ರೂ ಒಂದು ಸಾವಿರ / ₹ 1.000/-	[illegible]
15	[illegible]	ರೂ ಒಂದು ಸಾವಿರ / ₹ 1.000/-	[illegible]
16	[illegible]	ರೂ ಒಂದು ಸಾವಿರ / ₹ 1.000/-	[illegible]
17	[illegible]	ರೂ ಒಂದು ಸಾವಿರ / ₹ 1.000/-	[illegible]
18	[illegible]	ರೂ ಒಂದು ಸಾವಿರ / ₹ 1.000/-	[illegible]
19	[illegible]	ರೂ ಎರಡು ಸಾವಿರ / ₹ 2.000/-	[illegible]
20	[illegible]	ರೂ ಐದು ನೂರು / ₹ 500/-	[illegible]
		ಒಟ್ಟು ರೂ ₹ 20.000/-	

ಪಶು ವೈದ್ಯಾಧಿಕಾರಿ
ಪಶು ಚಿಕಿತ್ಸಾಲಯ [illegible]
[illegible]

ವಿ.ಪರಿಷತ್ ಪ್ರ.ಸಂ 1005 ಅನುಬಂಧ

[illegible] ಕಾರ್ಯಾಲಯ [illegible]
[illegible] 5853

ಮಾನ್ಯ ಉಪನಿರ್ದೇಶಕರು
ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಉತ್ತರ ಕನ್ನಡ (ಜಿ).

ಉಚಿತವಾಗಿ ನೀಡುವ ಕೋಳಿಮರಿಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ದೂರು ದಾಖಲಾಗಿದ್ದು, ಇದರ ಬಗ್ಗೆ ಸ್ಪಷ್ಟೀಕರಣ ನೀಡುತ್ತಿರುವ ಬಗ್ಗೆ.

ಮಾನ್ಯರೇ,

ದಿನಾಂಕ [illegible] ರ ಶುಕ್ರವಾರದಂದು ಬೆಳಗ್ಗೆ 11:30 ರ ಸಮಯ[illegible] ಪಶುಚಿಕಿತ್ಸಾಲಯ, ರಾಮನಗರ ಇಲ್ಲಿಗೆ "ಅಸೀಲ್" ಕೋಳಿಮರಿಗಳನ್ನು ಸ[illegible] ಮಾಡಿದ್ದು ಇರುತ್ತದೆ ಈ ಹಿಂದೆ 2018-19 ನೇ ಸಾಲಿನಲ್ಲಿ ಇಲಾಖೆ ವ[illegible] "ಗಿರಿರಾಜ" ಕೋಳಿಮರಿಗಳನ್ನು ಸರಬರಾಜು ಮಾಡಿದ್ದು, ಆಗಿನ ಮೇಲಾಧಿಕಾರಿಗ[illegible] ನಿರ್ದೇಶನದಂತೆ ಶೇಕಡಾ 25% ರಷ್ಟು ವಂತಿಗೆಯನ್ನು ಫಲಾನುಭವಿಗಳಿಂದ ಪಡೆದು ವಿತರಿಸಲಾಗಿತ್ತು.

ಆದರೆ ಈಗ ಸರಬರಾಜು ಆದ ಕೋಳಿಮರಿಗಳು [illegible] ಯೋಜನೆಯಲ್ಲಿ ಹಾಗೂ ಎಷ್ಟು ವಂತಿಗೆ ಪಡೆದು ವಿತರಿಸಬೇ[illegible] ಎಂದು ಮಾನ್ಯ ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಜೋಯಿಡಾ ಇವರಿ[illegible] ಯಾವುದೇ ನಿರ್ದೇಶನಗಳು ಇರುವುದಿಲ್ಲ, ಹಾಗೂ ಫಲಾನುಭವಿಗಳ ಪಟ್ಟಿ[illegible] ಎಲ್ಲಿಯೂ ಸಹ ಉಚಿತವಾಗಿ ನೀಡಬೇಕೆಂದು ನಮೂದಿಸಿರುವುದಿಲ್ಲ.

ಆದ ಕಾರಣ ನಾನು ಫಲಾನುಭವಿಗಳಿಂದ ಶೇ 25% ವಂತಿಗೆ ಪಡೆದು ಮರಿಗಳನ್ನು ವಿತರಿಸುವ [illegible] ಆಗಿರುತ್ತದೆ. ಒಂದು ವೇಳೆ ಸಾಧ್ಯ[illegible] ವಿತರಿಸಲಾದ ಕೋಳಿಮರಿಗಳನ್ನು ಉಚಿತವಾಗಿ ನೀಡಬೇಕೆಂದು ಇದ್ದರೆ ನನ್ನ ಬ[illegible] ಇರುವ ಹಣವನ್ನು ಫಲಾನುಭವಿಗಳಿಗೆ ಹಿಂತಿರುಗಿ ಪಾವತಿಸುತ್ತೇನೆ ಎಂದು ಮಾಹಿತಿ ಸಲ್ಲಿಸುತ್ತೇನೆ.

ಸ್ಥಳ: ರಾಮನಗರ
ದಿನಾಂಕ: [illegible]

(ಇಂತಿ ನಿಮ್ಮ ವಿಶ್ವಾಸಿ)
[illegible]
ಪಶು ವೈದ್ಯಾಧಿಕಾ[illegible]
ಪಶು ಚಿಕಿತ್ಸಾಲಯ [illegible]
ಜೋಯಿಡಾ [illegible]

ಪ್ರತಿಯನ್ನು:-
ಮಾನ್ಯ ಸಹಾಯಕ ನಿರ್ದೇಶಕರು ಪಶು ಆಸ್ಪತ್ರೆ ಜೋಯಿಡಾ ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.